OS 85/2021

PW-1

ದಿನಾಂಕಃ **10.04.2023** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ವಾದಿಗಳ ಪರ ಶ್ರೀ. ವಿ ಎಂ / ಎಂ ಬಿ ವಕೀಲರಿಂದಃ**

ನನ್ನ ಪರವಾಗಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ದಾಖಲಾತಿಗಳನ್ನು ನಿಶಾನೆಗೊಳಿಸಬೇಕಾಗಿ ವಿನಂತಿ.

ದಿಃ 26.11.2021 ರ ನೋಂದಾಯಿತ ವಿಭಾಗಪತ್ರದ ಆನಲೈನ್ ಪ್ರತಿ ನಿಪಿ.8 ಎಂದು, ವೈ ಎನ್ ಹೊಸಕೋಟೆ ಗ್ರಾಮ ಪಂಚಾಯತಿ, ಪಾವಗಡ ತಾಲೂಕು ರವರು ನೀಡಿರುವ ಖಾತಾ ಎಕ್ಸಟ್ರಾಕ್ಟ ದೃಡೀಕೃತ ನಕಲು ನಿಪಿ.9 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಪಿ ವಿ ವೈ ವಕೀಲರಿಂದಃ**

ನೀವು ಹಾಜರುಪಡಿಸಿರುವ ನಿಪಿ.8 ವಿಭಾಗ ಪತ್ರದಲ್ಲಿ ಲಕ್ಷ್ಮಿದೇವಮ್ಮ ಮತ್ತು ಅವರ ಮಕ್ಕಳು ಮಾತ್ರ ಪಕ್ಷಗಾರರು ಬೇರೆ ಯಾರು ಇಲ್ಲ ಎಂದರೆ ಸರಿ. ಸದರಿ ವಿಭಾಗದ ಮೂಲಕ ಹಂಚಿಕೆ ಮಾಡಿಕೊಂಡಿರುವ ಆಸ್ತಿ ಒಟ್ಟು ಕುಟುಂಬದ ಆಸ್ತಿ ಹೌದಾ ಅಥವಾ ಅಲ್ಲವಾ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಸ್ವತ್ತಲ್ಲ ಅದು ಲಕ್ಷ್ಮಿದೇವಮ್ಮನವರ ಆಸ್ತಿ ಎಂದು ಉತ್ತರಿಸುತ್ತಾರೆ. ಅದು ಲಕ್ಷ್ಮಿದೇವಮ್ಮ ನವರ ಹೆಸರಿನಲ್ಲಿ ಇದ್ದರೂ ಲಕ್ಷ್ಮಿದೇವಮ್ಮ ಮತ್ತು ಅವರ ಮಕ್ಕಳು ಹಂಚಿಕೊಂಡಿರುವ ಆಸ್ತಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸದರಿ ವಿಭಾಗ ಪತ್ರ ನೋಂದಾಯಿತ ವಿಭಾಗ ಪತ್ರವಾಗಿರುವ ಕಾರಣ ಕಾನೂನಿನ ರೀತಿ ಸ್ವತ್ತು ಹಂಚಿಕೆಯಾಗಿದೆ ಎಂದರೆ ಸಾಕ್ಷಿ ಕಾನೂನಿನ ರೀತಿ ಆಗಿಲ್ಲ ಎಂದು ಉತ್ತರಿಸುತ್ತಾರೆ. ನೀವು ಲಕ್ಷ್ಮಿದೇವಮ್ಮ ನವರ ಮಗನಾ ಎಂದರೆ ಸಾಕ್ಷಿ ಅವರ ಅಕ್ಕನ ಮೊಮ್ಮಗ ಎಂದು ಉತ್ತರಿಸುತ್ತಾರೆ. ಸದರಿ ನೋಂದಾಯಿತ ವಿಭಾಗಪತ್ರ ಕಾನೂನಿನ ರೀತಿ ಮಾನ್ಯವಾಗತಕ್ಕದಲ್ಲ ಎಂದು ಪ್ರಶ್ನಿಸಿ ಏನಾದರೂ ಕಾನೂನಿನ ಕ್ರಮ

ಕೈಗೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ, ಅದಕ್ಕಾಗಿಯೇ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದು ಉತ್ತರಿಸುತ್ತಾರೆ. ಲಕ್ಷ್ಮಿದೇವಮ್ಮ ನವರಿಗೆ ವಯಸ್ಸಾಗಿರುವ ಕಾರಣ ಅವರ ಕುಟುಂಬದ ಆಸ್ತಿಯನ್ನು ಅವರ ಮಕ್ಕಳಿಗೆ ಹಂಚಿ ವಿಭಾಗ ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಪಾವಗಡ.